# ಚಿಂತಾಮಣಿ ಕೊಡ್ಲೆಕೆರೆ ಪದ್ಯಗಳು



## ಕೂಸು ನಕ್ಕಳು

ಸುತ್ತ ಕತ್ತಲು
ಕೂಸು ಅತ್ತಳು!

ಬೆಕ್ಕು ಬಂದಿತು
ಮಿಯಾಂವ್ ಅಂದಿತು

ನಾಯಿ ಬಂದಿತು
ಬೌ ಬೌ ಅಂದಿತು

ಅಳಿಲು ಬಂದಿತು
ಕಿಚ್ ಕಿಚ್ ಅಂದಿತು

ಕರು ಬಂದಿತು
ಅಂಬಾ ಅಂದಿತು

ಅಮ್ಮ ಬಂದಳು
ಎತ್ತಿಕೊಂಡಳು

ಕಳೆದು ಕತ್ತಲು
ಕೂಸು ನಕ್ಕಳು!

## ಈಗಿಂದೀಗ

ಯಾರ್ ಹೇಳ್ತೀರಿ ಈಗಿಂದೀಗ
ಹದಿನಾರೊಂದ್ಲಾ ಮಗ್ಗಿ?
ಹೇಳಿದವರಿಗೆ ಈಗಿಂದೀಗ
ಹದಿನಾರ್ ತಟ್ಟೆ ಹುಗ್ಗಿ!

## ಮಾತು ಮಾತು ಮಾತು

ಗುಬ್ಬಿಮರಿ ತುಂಬಾ ಜಾಣ
ಬಹಳ ಕಮ್ಮಿ ಮಾತು
'ಯಾಕೆ ಹೀಗೆ?' ಕೇಳಿ ನೋಡಿ
ಹೇಳುವುದು ಆ ಗುಬ್ಬಿಮರಿ
ಮುತ್ತಿನಂಥಾ ಮಾತು
ಗೂಡಿನೊಳಗೇ ಕೂತು!

'ಮಾತು! ಮಾತು! ಮಾತು!
ಮಾತಿನಿಂದ್ಲೇ ಈ ದೇಶ
ಹಾಳಾಗಿ ಹೋತು!
ಎಲ್ಲಾರ್ ಮನೆ ಗಿಡದಲ್ಲೂ
ಇದ್ದದ್ದೇ ತೂತು!
ಥುಥುಥುತೂ
ಚಿಂವ್ ಚಿಂವ್ ಚಿಂವ್ಥು ಥುಥುತೂ'



## ಆನೆಮರಿಗೆ ಕಡಲೆಪುರಿ

ಒಂದು ಆನೆಮರಿ
ಸೊಂಡಿಲಲ್ಲಿ ಹಿಡಿದುಕೊಂಡು
ಪುಟ್ಟ ನವಿಲುಗರಿ
ಕೇಳುತಿತ್ತು ಅಂಗಡೀಲಿ
ಸೇರು ಕಡಲೆಪುರಿ

ಎಷ್ಟು ಬೇಕೋ ತಂದುಕೊಡುವೆ
ಅಷ್ಟೂ ನವಿಲುಗರಿ
ನನಗೆ ಬೇಕಾದ್ದಿಷ್ಟೆ ಈಗ
ಸೇರು ಕಡಲೆಪುರಿ

## ಹೆಸರಿನ ಕಥೆ

ಕೇಳಿತು ಪುಟಾಣಿ ಹೇನು:
ನನಗೆ ಹೆಸರಿಲ್ಲವೇನು?

ರಸ್ತೆ ಮಧ್ಯದಲಿ ಒಂಟೆ:
'ನನಗೂ ಹೆಸರು... ಉಂಟೆ?'

ಕೇಳಿತು ಪ್ರೀತಿಯ ಕತ್ತೆ:
'ನನಗೂ ಹೆಸರಿಡಿ ಮತ್ತೆ!'

ಹೆಸರು ಕೊಟ್ಟು ಕೊಟ್ಟೂ
ಪುಟ್ಟ ಪುಟ್ಟಿ ಸುಸ್ತು!

ಆದರೂ ಕರೆವರು 'ಬನ್ನಿರಿ'
'ಸುಂದರ ಹೆಸರು ಪಡೆಯಿರಿ'

'ಎಲ್ಲರಿಗೂ ಇದೆ ಹೆಸರು
ಹೆಸರೇ ಬಾಳಿನ ಉಸಿರು!'

## ಈಗಿಂದೀಗ

ಯಾರ್ ಹೇಳ್ತೀರಿ ಈಗಿಂದೀಗ
ಹದಿನಾರೊಂದ್ಲಾ ಮಗ್ಗಿ?
ಹೇಳಿದವರಿಗೆ ಈಗಿಂದೀಗ
ಹದಿನಾರ್ ತಟ್ಟೆ ಹುಗ್ಗಿ!



ಚಿತ್ರಗಳು: ಶಿಲ್ಪಾ ಕಬ್ಬಿನಕಂತಿ